ಹೊಸದುರ್ಗ ತಾಲ್ಲೂಕಿನಲ್ಲಿ ಪಶುವೈದ್ಯ ಶಾಲೆಯನ್ನು ಪ್ರಾರಂಭಿಸುವುದು

೧೬೭೧. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ವಕ್ಫ್ ಮತ್ತು ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರಸಕ್ತ ಸಾಲಿನಲ್ಲಿ ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಪಶುವೈದ್ಯ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರದವರ ಉದ್ದೇಶವೇನಾದರೂ ಇದೆಯೇ.

ಆ) ಹಾಗಿದ್ದಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಎಷ್ಟು ಪಶುವೈದ್ಯ ಶಾಲೆಗಳನ್ನು ತೆರೆಯಲು ಅನುಮತಿ ನೀಡಲಾಗುವುದು.

ಇ) ಹೊಸದುರ್ಗ ತಾಲ್ಲೂಕಿನ ದೇವಪುರ ಮಂಡಲ ಪಂಚಾಯಿತ ವ್ಯಾಪ್ತಿಯಲ್ಲಿ ಪಶುವೈದ್ಯ ಶಾಲೆಗೆ ಮಂಜೂರಾತಿ ನೀಡಲಾಗುವುದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) —

ಅ) ರಾಜ್ಯದಲ್ಲಿ ಹೊಸದಾಗಿ ಪಶುವೈದ್ಯ ಶಾಲೆಗಳನ್ನು ಪ್ರಾರಂಭಿಸುವ ವಿಷಯವು ಜಿಲ್ಲಾ ಪರಿಷತ್ತುಗಳ ಕಾರ್ಯವ್ಯಾಪ್ತಿಗೆ ಬರುವುದರಿಂದ ಪ್ರಸಕ್ತ ಸಾಲಿನಲ್ಲಿ ಆಯಾಯಾ ಜಿಲ್ಲಾ ಪರಿಷತ್ತುಗಳೇ ನಿರ್ಧರಿಸಬೇಕಾಗುತ್ತದೆ.

ಆ) ಇಲ್ಲ.

ಇ) ಚಿತ್ರದುರ್ಗ ಜಿಲ್ಲಾ ಪರಿಷತ್ತಿನಿಂದ ಸೂಕ್ತ ಪ್ರಸ್ತಾವನೆ ಬಂದ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಖಾತೆಯ ಸಚಿವರು) – ಇಲ್ಲಿ ಮೂರನೇ ಪ್ರಶ್ನೆಯನ್ನು ಸ್ವಲ್ಪ ಬದಲಾಯಿಸಿಕೊಳ್ಳಬೇಕು. ಇದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಚಿತ್ರದುರ್ಗ ಜಿಲ್ಲಾ ಪರಿಷತ್‌ನಿಂದ ಈ ಬಗ್ಗೆ ಸೂಕ್ತ ನಿರ್ಣಯ ಬಂದ ನಂತರ ತೆಗೆದುಕೊಳ್ಳಬೇಕಾಗಿದೆ ಎನ್ನುವುದನ್ನು ಸೇರಿಸಿಕೊಳ್ಳಬೇಕು.

ಶ್ರೀ ವಸಂತ ವಿ ಸಾಲಿಯಾನ.—ಶ್ರೀ ಜಿ ರಾಮದಾಸ್ ಪರವಾಗಿ, ಚಿತ್ರದುರ್ಗ ಜಿಲ್ಲಾ ಪರಿಷತ್‌ಗೆ ಎಷ್ಟು ಪ್ರೊಪೋಸಲ್ ಪಶುವೈದ್ಯ ಶಾಲೆಗಳ ಸ್ಥಾಪನೆ ಬಗ್ಗೆ ಬಂದಿದೆ ? ಎರಡನೆಯದು ಎಷ್ಟು ಪ್ರೊಪೋಸಲ್‌ಗೆ ಮಂಜೂರಾತಿ ಸಿಕ್ಕಿದೆ ? ಜಿಲ್ಲಾ ಪರಿಷತ್ ಪ್ರಾರಂಭ ಆಗುವ ಮುಂಚೆ ಎಷ್ಟು ಪ್ರೊಪೋಸಲ್‌ಗಳು ಬಂದಿದ್ದು ಆದರಲ್ಲಿ ಎಷ್ಟು ಪ್ರಾರಂಭ ಆಗಿವೆ. ಮೂರನೆಯ ಪ್ರಶ್ನೆ ಚಿತ್ರದುರ್ಗ ಜಿಲ್ಲೆಯ ದೇವಪುರ ಮಂಡಲಕ್ಕೆ ಒಂದು ಪಶುವೈದ್ಯ ಶಾಲೆಯನ್ನು ತೆರೆಯಲು ಒಂದು ಪ್ರೊಪೋಸಲ್ ಬಂದಿದೆಯೇ, ಬಂದಿದ್ದರೆ ಅದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ನನ್ನ ಉತ್ತರವನ್ನು ಮಾನ್ಯ ಸದಸ್ಯರು ಗಮನಿಸದ ಹಾಗೆ ಕಾಣುತ್ತದೆ. ಎಂದು ನಾನು ಭಾವಿಸುತ್ತೇನೆ. ಪಶುವೈದ್ಯ ಶಾಲೆಗಳನ್ನು ಸ್ಥಾಪಿಸತಕ್ಕ ಕಾರ್ಯವಿಧಾನ ಮತ್ತು ಅಧಿಕಾರ ಆಯಾ ಜಿಲ್ಲಾ ಪರಿಷತ್‌ಗಳಿಗೆ ಇರುವುದರಿಂದ ಸರ್ಕಾರದ ಮುಂದೆ ಯಾವ ಪ್ರೊಪೋಸಲ್ ಬಂದಿರುವುದಕ್ಕೆ ಅವಕಾಶ ಇಲ್ಲ ಆದರೂ ಕೂಡ ಇದು ಪೀಠಿಕಾ ರೂಪವಾದಂತಹ ಉತ್ತರ. ಹೊಸದುರ್ಗ ತಾಲ್ಲೂಕಿನಲ್ಲಿ ಈಗಾಗಲೇ ಒಟ್ಟು ೯ ಪಶುವೈದ್ಯ ಶಾಲೆಗಳು ಈ ಕೆಳಕಂಡ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿವೆ ''ಹೊಸದುರ್ಗ ಗ್ರಾಮಾಂತರ ಪಶುವೈದ್ಯ ಶಾಲಾ, ಶ್ರೀರಾಮಪುರ, ಬೆಳಗೂರು, ಮುತ್ತೋಡ್ ಕಂಚೀಪುರ, ಜನನಕಲ್, ತಂಡಗ, ಮಲ್ಲಪ್ಪನ ಹಳ್ಳಿ, ಗುಡ್ಡದ ಬೇರಳೆ ಕೆರೆ,'' ಆದ್ದರಿಂದ ಈ ಬಗ್ಗೆ ಹೊಸದುರ್ಗ ಜಿಲ್ಲಾ ಪರಿಷತ್‌ನವರೇ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವರು ಯಾವುದೋ ಊರಿನ ಹೆಸರು ಹೇಳಿದರು. ಈ ಊರಿನ ಪ್ರೊಪೋಸಲ್ ಬಂದಿದೆಯಾ, ಬಂದಿದ್ದರೆ ಮಂಜೂರಾತಿ ನೀಡಲಾಗಿದೆಯೇ ಎಂದು ಕೇಳಿದರು, ಈ ಪ್ರಶ್ನೆಯನ್ನು ಮಾನ್ಯ ಸದಸ್ಯರು ಜಿಲ್ಲಾ ಪರಿಷತ್‌ನಲ್ಲಿ ಕೇಳಿ ಉತ್ತರ ಪಡೆಯಲಿ ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ವಂಸತ ಎ. ಸಾಲಿಯಾನ್.—ಇದು ಜಿಲ್ಲಾ ಪರಿಷತ್‌ಗೆ ಸೇರಿದ್ದರೂ ಸಹ ಸರ್ಕಾರ ಮಂಜೂರಾತಿ ಪಡೆಯುತ್ತದೆ, ಸರ್ಕಾರ ಮಂಜೂರಾತಿ ಮಾಡಿ, ಜಿಲ್ಲಾ ಪರಿಷತ್‌ಗೆ ಕಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಇಲ್ಲ, ಮಂಜೂರಾತಿಯನ್ನು ಕೊಡತಕ್ಕಂಥ ಅಧಿಕಾರವನ್ನು ಕಾನೂನು ಪ್ರಕಾರ ಸರ್ಕಾರ ಇಟ್ಟುಕೊಂಡಿಲ್ಲ.

ರೇಷ್ಮೆ ಕೈಗಾರಿಕೆ

೧೩೯೧. ಶ್ರೀ ಜಿ ರಾಜುಗೌಡ (ಹನೂರು) ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯದ ಇಂಡಸ್ಟ್ರೀಸ್ ಕಾರ್ಪೊರೇಷನ್ (ಕೆ.ಎಸ್.ಐ.ಸಿ.) ಎಂದಿನಿಂದ ಅಸ್ತಿತ್ವಕ್ಕೆ ಬಂದಿತು ?

ಆ) ಇದರ ಮೂಲ ಬಂಡವಾಳವೇನು ?

ಇ) ಈ ಸಂಸ್ಥೆಯಿಂದ ರೇಷ್ಮೆ ಕೈಗಾರಿಕೆಗೆ ಯಾವ ರೀತಿ ಪ್ರಯೋಜನವಾಗಿದೆ ?

ಈ) ಪ್ರಾರಂಭದಿಂದ ಈ ಸಂಸ್ಥೆಯು ಗಳಿಸಿರುವ ಲಾಭ ಮತ್ತು ನಷ್ಟವೇನು ?

ಶ್ರಿ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಮತ್ತು ರೇಷ್ಮೆ ಸಚಿವರು).—

ಅ) ಕರ್ನಾಟಕ ರೇಷ್ಮೋದ್ಯಮಗಳ ನಿಗಮ ನಿಯಮಿತ ಸಂಸ್ಥೆಯು ದಿನಾಂಕ ೧೨-೦೪-೧೯೮೦ ರಲ್ಲಿ ಅಸ್ತಿತ್ವಕ್ಕೆ ಬಂದಿತು, ಹಾಗೂ ತನ್ನ ವಾಣಿಜ್ಯ ವ್ಯವಹಾರದ ದೃಢೀಕರಣವನ್ನು ದಿನಾಂಕ ೦೬-೦೪-೧೯೮೧ ರಿಂದ ಜಾರಿಗೆ ಬರುವಂತೆ ಪಡೆದಿದೆ.

ಆ) ಅಧಿಕೃತ ಷೇರು ಬಂಡವಾಳ—ರೂ. ೧೫೦೦ ಲಕ್ಷಗಳು ಪಾವತಿಸಿರುವ ಬಂಡವಾಳ—ರೂ. ೯೦೫ ಲಕ್ಷಗಳು.

ಇ) ಅ) ಕರ್ನಾಟಕ ರೇಷ್ಮೋದ್ಯಮಗಳ ನಿಗಮ ನಿಯಮಿತವು ರೇಷ್ಮೆ ಕೈಗಾರಿಕಾ ಸಂಸ್ಕರಣ ಕಾರ್ಯಕ್ಷೇತ್ರದಲ್ಲಿ ಅಗ್ರಗಣ್ಯ ಸಂಸ್ಥೆಯಾಗಿದೆ. ಜಪಾನ್ ಮತ್ತು ದಕ್ಷಿಣ ಕೊರಿಯಾ ದೇಶಗಳಿಂದ ಆಮದು ಮಾಡಲ್ಪಟ್ಟ ಯಂತ್ರೋಪಕರಣಗಳನ್ನು ಸ್ಥಾವರೀಕರಿಸಿ ರೇಷ್ಮೆ ಉತ್ಪಾದನೆ ಮಾಡುತ್ತಿದೆ.

ಆ) ರೇಷ್ಮೆ ಕೃಷಿ ಕ್ಷೇತ್ರದಲ್ಲಿ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತವು ಪ್ರತಿ ವರ್ಷ ಸುಮಾರು ರೂ. ೩೦೦ ಲಕ್ಷ ಮೌಲ್ಯದ ಮಲ್ಬೇ ಪೋಲ್ಟಿನ್ ಮತ್ತು ಬೈವೋಲ್ಟಿನ್, ಗೂಡು ಗಳನ್ನು ಖರೀದಿ ಮಾಡುತ್ತದೆ. ತತ್ಪರಿಣಾಮವಾಗಿ ಕರ್ನಾಟಕ ರಾಜ್ಯದ ಸಾವಿರಾರು ರೇಷ್ಮೆ ಬೆಳೆಗಾರರು ಹಾಗೂ ರೇಷ್ಮೆ ಸಾಣಿದಾರರಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಉದ್ಯೋಗ ಅವಕಾಶ ಕಲ್ಪಿಸಿಕೊಟ್ಟಂತಾಗಿದೆ.

ಇ) ಕರ್ನಾಟಕ ರೇಷ್ಮೋದ್ಯಮಗಳ ನಿಗಮ ನಿಯಮಿತವು ಸುಮಾರು ರೂ. ೧೫೦ ಲಕ್ಷದ ಕಚ್ಚಾ ಜೂಟು ರೇಷ್ಮೆ (ಸಿಲ್ಕ್ ವೇಸ್ಟ್‌ನ್ನು) ಖರೀದಿಸುವ ಪರಿಣಾಮವಾಗಿ ಅನೇಕ ರೇಷ್ಮೆ ಕೃಷಿಕರಿಗೆ ಹಾಗೂ ನೂಲು ತೆಗೆಯುವವರಿಗೆ ಉದ್ಯೋಗಾವಕಾಶ ಮಾಡಿಕೊಟ್ಟಿದೆ.

ಈ) ಮೈಸೂರು, ಚನ್ನಪಟ್ಟಣ, ಟಿ. ನರಸೀಪುರ ಹಾಗೂ ಕನಕಪುರ ಇಲ್ಲಿರುವ ತನ್ನ ನಿಗಮದ ಘಟಕಗಳ ಮೂಲಕ ಕರ್ನಾಟಕ ರಾಜ್ಯದ ೩೦೦೦ ಜನರಿಗೆ ಉದ್ಯೋಗ ಅವಕಾಶ ಕಲ್ಪಿಸಿ ಕೊಡಲಾಗಿದೆ. ಇದಲ್ಲದೆ ಕರ್ನಾಟಕ ನೂರಾರು ಜನರು ಕೆ.ಎಸ್.ಐ.ಸಿ.ಯ ವಾಣಿಜ್ಯ ವ್ಯವಹಾರದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಅವಲಂಬಿತರಾಗಿರುವರು.